ದಾಟಿ ಸುರಕ್ಷಿತವಾಗಿ ಸರಕು ತಲುಪಿಸಿದ ಚಾಲಕರು ಸಿಗುತ್ತಾರೆ. ಸೊಳ್ಳೆ ಕಡಿಸಿಕೊಳ್ಳುತ್ತ ಮೂಟೆಗಳ ಮಧ್ಯೆ ರಾತ್ರಿನಿದ್ದೆ ಕಳೆದು ಬೆಳಿಗ್ಗೆ ತಾಜಾ ತರಕಾರಿ ಮಾರುವವರನ್ನು ಕಾಣಬಹುದು, ಚೆಂದದ ಹೂಮಾಲೆ ಕಟ್ಟುವವಳ ಕೌಶಲ್ಯ ದರ್ಶನ ಸಾಧ್ಯವಿದೆ. ಲಾಂಡ್ರಿಯ ಅಜ್ಜಿ ನಿನ್ನೆ ಕೊಟ್ಟ ಹಣದಲ್ಲಿ ಹತ್ತು ರೂಪಾಯಿ ಹೆಚ್ಚಿತ್ತೆಂದು ನೆನಪಿಟ್ಟು ನಿಮಗೆ ಅವಳು ಹಿಂದಿರುಗಿಸಿದ್ದರಲ್ಲಿ ತನ್ನದಲ್ಲದನ್ನು ಮುಟ್ಟಬಾರದೆಂಬ ಪ್ರಾಮಾಣಿಕತೆಯ ಪಾಠವಿದೆಯಲ್ಲವೇ? ನೈತಿಕತೆ ಬದುಕಿನ ದೊಡ್ಡ ಶಕ್ತಿ, ಇದನ್ನು ಕಳೆದುಕೊಳ್ಳದ ಪ್ರಜ್ಞೆ ಉಳಿಯಲಿ. ದೂರದ ಹೊಲದಲ್ಲಿ ಉಳುಮೆ, ಬಿತ್ತನೆ, ಕೊಯ್ಲಿನ ಕಾಯಕದಲ್ಲಿ ದಿನ ಕಳೆಯುವ ರೈತರು ಸೇರಿದಂತೆ ಯಾರೆಲ್ಲ ಪರಿಶ್ರಮದ ದಾರಿಯಲ್ಲಿದ್ದಾರೆಂದು ಢಾಳಾಗಿ ಕಾಣಿಸುತ್ತದೆ. ಸಮಾಜ ಪೂರ್ತಿ ಹಾಳಾಗಿಲ್ಲವೆಂಬುದಕ್ಕೆ ಹೆಜ್ಜೆ ಹೆಜ್ಜೆಗೆ ಸಾಕ್ಷಿಗಳಿವೆ. ಒಳ್ಳೆಯದನ್ನು ನೋಡುವ, ಮಾಡುವ, ಪ್ರೋತ್ಸಾಹಿಸುವ ಮನಸ್ಸು ಮಾಡಿದರೆ ಸಾಕೇ ಸಾಕು. ಸಮಾಜದ ದೊಡ್ಡ ಸಾಧನೆಯಾಗುತ್ತದೆ. ಸಮಾಜಕ್ಕೆ ಹೇಳಬೇಕಾದ ಒಳ್ಳೆಯದನ್ನು ಸಂತರು ಹೇಳಿಯಾಗಿದೆ, ಆಚರಿಸುವುದು ಬಾಕಿಯಿದೆ.

ವೃತ್ತಿಯಲ್ಲಿ ಎಷ್ಟು ಗಳಿಸಿದಿರಿ? ಯಾರಿಗೆ ಎಷ್ಟು ಕೊಡಿಟ್ಟಿರಿ? ಹೊಸ ಮನೆ ಕಟ್ಟಿದಿರಾ? ಕಾರು ಕೊಂಡಿರಾ? ಮಕ್ಕಳ ಮದುವೆ ಮಾಡಿದಿರಾ? ಆಗಲಿ, ನಿಮ್ಮ ಆಭಿವೃದ್ಧಿ ಖುಷಿಯದು. ಆದರೆ ಸಮಾಜದ ಭಾಗವಾದ ನಾವಷ್ಟೇ ಎಲ್ಲ ಹೀರಿ ಬೆಳೆಯಲಾಗದು, ಒಂದಿಷ್ಟು ಉತ್ತಮ ಕಾರ್ಯಕ್ಕೆ ವಿನಿಯೋಗವಾದರೆ ಒಳ್ಳೆಯದು. ಕೀಟ, ಪಕ್ಷಿ, ಪ್ರಾಣಿಗಳು ಒಂದಿಷ್ಟು ತಿಂದ ಬಳಿಕ ರೈತರ ಹೊಲದ ಕಾಳು ಮಾರುಕಟ್ಟೆಗೆ ಬಂದು ನಮ್ಮ ಆಹಾರವಾಗಿದೆ. ಹಣ ನೀಡಿ ಖರೀದಿಸಿದ ನಾವು ಅನ್ನದ ಮೂಲದಿಂದ ನಮ್ಮ ತಟ್ಟೆಯ ಕೂಳಿನ ತನಕ ನೋಡುವುದು ಅಭ್ಯಾಸವಾದರೆ ತಾನು ತನ್ನದೆಂಬ ಮನಸಿನ ಸ್ವಾರ್ಥ ಅಷ್ಟರಮಟ್ಟಿಗೆ ಕಡಿಮೆಯಾದೀತು. ಶಾಲೆಗಳು ಬಾಗಿಲು ಮುಚ್ಚಿದಾಗ ನೆಟ್‌ವರ್ಕ್ ಹುಡುಕಿ ಆನ್‌ಲೈನ್ ಪಾಠದ ಕಸರತ್ತು ನಡೆಯಿತಲ್ಲವೇ? ದೂರ ದೂರದ ಜ್ಞಾನವನ್ನು ಪುಟಾಣಿಗಳ ಪುಟ್ಟ ಮಿದುಳಿಗೆ ಅಂಟಿಸಲು ನಡೆಸಿದ ಕಸರತ್ತಿನಂತೆ ನೆಲ ನೋಡಿ ನಡೆಯುವ ಅಭ್ಯಾಸ ನಮಗೂ ಬರಬೇಕು. ಸುತ್ತಲಿನ ಸರಹದ್ದಿನ ಹತ್ತಾರು ಹಿರಿಯಜೀವಗಳನ್ನು ಮಾತನಾಡಿಸಿದರೆ ಜವಾರಿ ಭಾಷೆ ಹಾಗೂ ಅವರೆಲ್ಲ ಬದುಕು ಕಟ್ಟಿದ ಕಾಲದ ಸವಾಲುಗಳ ಅರಿವಾಗಬಹುದು. ಕಷ್ಟ ನಮಗಷ್ಟೇ ಅಲ್ಲ, ಹಿಂದೆಯೂ ಇತ್ತೆಂಬುದು ಗೊತ್ತಾದಾಗ ಮನಸಿನ ಉದ್ವೇಗ ತುಸು ಕಮ್ಮಿಯಾಗಿ ಸಂಯಮ ಮೂಡಬಹುದು. ವ್ಯಕ್ತಿತ್ವ ವಿಕಸನ ನಮ್ಮ ನಾಳಿನ ಭವಿಷ್ಯದ ಬುನಾದಿಯಾಗಬೇಕಾದ ಸಂದರ್ಭವಿದು. ವೇಗದ ಓಟಕ್ಕಿಂತ ಮುಗ್ಗರಿಸದೇ ನಡೆಯಲು ಕಲಿಯುವುದೂ ಅಷ್ಟೇ ಮುಖ್ಯ.

> **ನಿಮ್ಮನ್ನು ನೀವು ಹೊಸದಾಗಿ ಕಂಡುಕೊಳ್ಳುವಲ್ಲಿ ಎಂದಿಗೂ ನಿಮಗೂ ವಯಸ್ಸಾಗುವುದಿಲ್ಲ.**
> **-ಸ್ಟೀವ್ ಹಾರ್ವೆ**

ಫಲ ಬಂದ ಕಾಫೀ ಗಿಡದ ಸೋತ ರೆಕ್ಕೆ ಕತ್ತರಿಸಿದಂತೆ ನಾವು ಹಳೆಯ ಅನುಭವ ಬಿಟ್ಟು ಹೊರಡಲಾಗದು. ಹೊಸ ಕನಸುಗಳಿಗೆ ಕೊರೊನಾ ವ್ಯಾಕ್ಸಿನ್ ಬರುವ ಕಾರಣಕ್ಕೆ ಹೊಸ ಕಾಲೂ ಬರುವುದಿಲ್ಲ. ಕಾಲ ಬದಲಾಗುವುದಿಲ್ಲ. ಸುಂದರ ಕನಸುಗಳ ಸಾಕಾರಕ್ಕೆ ನಮ್ಮ ಮನಸ್ಸು ಬದಲಾಗಬೇಕಷ್ಟೆ! ■




# ಹೊಸ ವರ್ಷದಲ್ಲಿ ವೃದ್ಧಿಸಲಿ ನೈತಿಕಪ್ರಜ್ಞೆ

**ನಮ್ಮ ಪರಿಸರ ನಿತ್ಯವೂ ಹೆಚ್ಚು ಹೆಚ್ಚು ಹಾಳಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ವೈಯಕ್ತಿಕ ಸ್ವಚ್ಛತೆ ಕಾಪಾಡುವ ನೈತಿಕ ಪ್ರಜ್ಞೆ 2021ರಲ್ಲಿ ನಮ್ಮದಾಗಬೇಕು.**

ನಿರಾಸೆಯ ಮಡುವಿನಲ್ಲಿ ಮುಳುಗುತ್ತಿರುವ ನಮಗೆ ಬರಲಿರುವ ದಿನಗಳು ಕೈಹಿಡಿದು ಮುನ್ನಡೆಸುತ್ತದೆ ಎನ್ನುವ ಭರವಸೆ ಇದೆ. ಕಳೆದ ವರ್ಷದಲ್ಲಿ ಎಲ್ಲರಿಗೂ ಅನೇಕ ಕಹಿ ಅನುಭವಗಳಾಗಿವೆ. ವೈಯಕ್ತಿಕವಾಗಿ ಹೇಳುವುದಾದರೆ, ನನ್ನ ಸಿನಿಮಾ ಬಿಡುಗಡೆ ಆಗುತ್ತದೆ ಎಂದುಕೊಂಡಿದ್ದೆ. ಮಾರ್ಚ್ 22ಕ್ಕೆ ಲಾಕ್‌ಡೌನ್ ಆಗಿದ್ದರಿಂದ ಬಿಡುಗಡೆ ಆಗಲಿಲ್ಲ. ಇನ್ನೇನೂ ‘ಸತ್ಯಂ’ ಚಿತ್ರೀಕರಣ ಆಗಬೇಕಿತ್ತು. ಅದಕ್ಕೂ ಬ್ರೇಕ್ ಬಿತ್ತು. ಎರಡು ಮೂರು ತಿಂಗಳು ಮನೆಯಲ್ಲಿ ಇರಬೇಕಾಯಿತು. ಇದು ನನಗೊಬ್ಬಳಿಗೆ ಮಾತ್ರ ಆದ ನೋವು ಅಲ್ಲ, ಎಲ್ಲರೂ ಅದನ್ನು ಉಂಡಿದ್ದೇವೆ. ಆದರೆ, ಮನೆಯಲ್ಲಿದ್ದೂ ತುಂಬ